ವಿಷಯ:- ರೇಷ್ಮೆ ಉತ್ಪಾದನೆಯಲ್ಲಿ ರಾಜ್ಯದ ಪಾಲು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 511 (1157)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ):- ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇಶದ ರೇಷ್ಮೆ ಉತ್ಪಾದನೆಯಲ್ಲಿ ರಾಜ್ಯದ ಪಾಲು ಎಷ್ಟು? ರೈತರು ಬೆಳೆದ ರೇಷ್ಮೆ ಬೆಳೆಗೆ ವೈಜ್ಞಾನಿಕವಾಗಿ ಬೆಲೆ ನಿಗದಿ ಮಾಡಲು ಸರ್ಕಾರಕ್ಕಿರುವ ಅನಾನುಕೂಲಗಳೇನು?

ಶ್ರೀ ವರದೇಗೌಡ (ರೇಷ್ಮೆ ರಾಜ್ಯ ಸಚಿವರು):-

ಅ) 1. ದೇಶದ ರೇಷ್ಮೆ ಉತ್ಪಾದನೆಯಲ್ಲಿ ರಾಜ್ಯದ ಪಾಲು ಶೇಕಡಾ 65ರಷ್ಟು ಇರುತ್ತದೆ.

2. ಸರ್ಕಾರವೇ ಎಲ್ಲಾ ಗೂಡನ್ನು ಖರೀದಿಸುವ ವ್ಯವಸ್ಥೆ ಇದ್ದಾಗ ಮಾತ್ರ ಬೆಲೆಯನ್ನು ನಿಗದಿಪಡಿಸಬಹುದು. ಗೂಡಿನ ಮಾರುಕಟ್ಟೆಯಲ್ಲಿ ಬಹಿರಂಗ ಹರಾಜು ಮುಖಾಂತರ ರೇಷ್ಮೆ ಗೂಡಿನ ಬೆಲೆ ನಿರ್ಧರಿಸಲ್ಪಡುತ್ತದೆ. ಬೇಡಿಕೆ, ಸರಬರಾಜು ಹಾಗೂ ಕಚ್ಚಾ ರೇಷ್ಮೆಯ ಬೆಲೆಗೆ ಅನುಗುಣವಾಗಿ ನೂಲು ಬಿಚ್ಚುವವರು ಗೂಡಿಗೆ ಬೆಲೆಯನ್ನು ನೀಡುತ್ತಾರೆ.

ವಿಷಯ:- ವಿಶೇಷ ಘಟಕ ಯೋಜನೆಯಲ್ಲಿ ಮಾಡಲಾದ ವೆಚ್ಚ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 512 (1118)

ಶ್ರೀ ಡಿ.ಆರ್.ಪಾಟೀಲ್ (ಗದಗ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91ರಿಂದ ಕಳೆದ ಹಣಕಾಸು ವರ್ಷದವರೆಗೆ ವಿಶೇಷ ಘಟಕ ಯೋಜನೆಯಡಿಯಲ್ಲಿ ಮಾಡಲಾದ ವೆಚ್ಚವೆಷ್ಟು, ವರ್ಷವಾರು ಹಾಗೂ ಇಲಾಖಾವಾರು ವಿವರ ನೀಡುವುದು.

ಆ) 1990-91ರಿಂದ ಇಲ್ಲಿಯವರೆಗೆ ಎಷ್ಟು ಕುಟುಂಬಗಳಿಗೆ ಪ್ರಯೋಜನವಾಗಿದೆ?

ಶ್ರೀ ಕೆ.ಎಂ.ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಅ) 1990-91ರಿಂದ 1995-96ನೇ ವರ್ಷದವರೆಗೆ ವಿಶೇಷ ಘಟಕ ಯೋಜನೆಯಡಿ ಇಲಾಖಾವಾರು ಮತ್ತು ವರ್ಷವಾರು ಖರ್ಚು ಮಾಡಿದ ಮಾಹಿತಿಯನ್ನು ಅನುಬಂಧ - 1ರಲ್ಲಿ ಲಗತ್ತಿಸಿದೆ.

ಆ) ವಿಶೇಷ ಘಟಕ ಯೋಜನೆಯಡಿ 1990-91ನೇ ಸಾಲಿನಿಂದ 1995-96ನೇ